ಕರ್ನಾಟಕ ಸರ್ಕಾರ

**ಆಯುಕ್ತರ ಕಛೇರಿ ಸಾರ್ವಜನಿಕ ಶಿಕ್ಷಣ ಇಲಾಖೆ ನೃಪತುಂಗ ರಸ್ತೆ ಬೆಂಗಳೂರು-1**

ಸಂಖ್ಯೆ ತ(3)/ನೋ.ಅ.ನೇ/01/2022-23 ದಿನಾಂಕ: 07.05.2022

**ಸುತ್ತೋಲೆ**

ವಿಷಯ:-2022-23 ನೇ ಸಾಲಿಗೆ ಸಾರ್ವಜನಿಕ ಶಿಕ್ಷಣ ಇಲಾಖೆಯ ಹಿರಿಯ ಅಧಿಕಾರಿಗಳನ್ನು ನೋಡಲ್ ಅಧಿಕಾರಿಗಳಾಗಿ ನೇಮಿಸುವ ಬಗ್ಗೆ.

ಉಲ್ಲೇಖ:-1. ಸರ್ಕಾರದ ಆದೇಶ ಸಂಖ್ಯೆ ಇಡಿ 375 ಯೋ.ಯೋ.ಕ 2007, ದಿನಾಂಕ 14-11-2007.

2. ಸರ್ಕಾರದ ಸುತ್ತೋಲೆ ಸಂಖ್ಯೆ ಇಡಿ 111 ಡಿ.ಎ.ಆರ್.2010, ದಿನಾಂಕ 30-08-2010.
3. ಸರ್ಕಾರದ ಆದೇಶ ಸಂಖ್ಯೆ ಇಡಿ 10 ಮಾಹಿತಿ. 2010, ದಿನಾಂಕ 16-09-2010.
4. ಸರ್ಕಾರದ ಆದೇಶ ಸಂಖ್ಯೆ ಇಡಿ 10 ಮಾಹಿತಿ. 2010, ದಿನಾಂಕ 14-12-2011.
5. ಸರ್ಕಾರದ ಆದೇಶ ಸಂಖ್ಯೆ ಇಡಿ 167 ಮಾಹಿತಿ. 2013, ದಿನಾಂಕ 21-11-2013.

* * * * *

ಉಲ್ಲೇಖಿತ ಸರ್ಕಾರದ ಪತ್ರಗಳಲ್ಲಿನ ನಿರ್ದೇಶನದಂತೆ, ಸಾರ್ವಜನಿಕ ಶಿಕ್ಷಣ ಇಲಾಖೆಯ ವಿವಿಧ ಯೋಜನೆಗಳಡಿ ಸಾಧಿಸಿರುವ ಪ್ರಗತಿ ಪರಿಶೀಲಿಸಲು ಇಲಾಖೆಯ ಹಿರಿಯ ಅಧಿಕಾರಿಗಳನ್ನು ಜಿಲ್ಲೆಗೊಬ್ಬರಂತೆ ನೋಡಲ್ ಅಧಿಕಾರಿಗಳನ್ನಾಗಿ ನೇಮಿಸಿ ಅದೇಶ ಹೊರಡಿಸಲಾಗಿರುತ್ತದೆ.

ಅದರಂತೆ ರಾಜ್ಯದ ಶೈಕ್ಷಣಿಕ ಜಿಲ್ಲೆಗಳಲ್ಲಿ ಶೈಕ್ಷಣಿಕ ಚಟುವಟಿಕೆಗಳನ್ನು ರಚನಾತ್ಮಕವಾಗಿ ಅನುಷ್ಠಾನಗೊಳಿಸಲು ಹಾಗೂ ಮೇಲ್ದರ್ಜೆಗೇರಿಸಲು, ಜಿಲ್ಲಾ ಮಟ್ಟದಲ್ಲಿ ಅನುಷ್ಠಾನಗೊಳಿಸಲಾಗುತ್ತಿರುವ ಇಲಾಖೆಯ ಎಲ್ಲಾ ಕಾರ್ಯಕ್ರಮಗಳ ಪ್ರಗತಿ ಪರಿಶೀಲನೆ, ನಿಗಧಿಪಡಿಸಿದ ಗುರಿಗಳನ್ನು ಸಾಧಿಸಲು ಅಧಿಕಾರಿಗಳಿಗೆ ವಹಿಸಿದ ಜಿಲ್ಲೆಗಳಿಗೆ ಪ್ರವಾಸ ಕೈಗೊಂಡು ಪ್ರತಿ ಮಾಹೆ ಸಭೆ ನಡೆಸಿ, ಸೂಕ್ತ ಮಾರ್ಗದರ್ಶನ ಮತ್ತು ಸಲಹೆ ಸೂಚನೆಗಳನ್ನು ನೀಡುವಂತೆ, ಈ ಕೆಳಕಂಡ ಸಾರ್ವಜನಿಕ ಶಿಕ್ಷಣ ಇಲಾಖೆಯ ಹಿರಿಯ ಅಧಿಕಾರಿಗಳನ್ನು ಅವರ ಪದನಾಮದ ಮುಂದೆ ಸೂಚಿಸಿರುವ ಜಿಲ್ಲೆಗಳಿಗೆ 2022-23 ನೇ ಸಾಲಿಗೆ ನೋಡಲ್ ಅಧಿಕಾರಿಗಳಾಗಿ ನೇಮಿಸಲಾಗಿದೆ. ಸದರಿ ನೋಡಲ್ ಅಧಿಕಾರಿಗಳು ವಹಿಸಿದ ಜಿಲ್ಲೆಗಳಿಗೆ ಪ್ರತಿ ತಿಂಗಳು ಭೇಟಿ ನೀಡಿ, ಪ್ರಗತಿ ಪರಿಶೀಲನಾ ಸಭೆ ನಡೆಸಿ, ಪ್ರಗತಿ ಪರಿಶೀಲನಾ ವರದಿಯನ್ನು ಪ್ರತೀ ಮಾಹೆ 10 ನೇ ದಿನಾಂಕದೊಳಗೆ ತಪ್ಪದೆ ಸಲ್ಲಿಸಲು ತಿಳಿಸಿದೆ ಮತ್ತು ನೋಡಲ್ ಅಧಿಕಾರಿಗಳು ಪರಿಶೀಲಿಸಬೇಕಾದ ಅಂಶಗಳ ಪಟ್ಟಿಯನ್ನು ಅನುಬಂಧಿಸಿದೆ.

| ಕ್ರ.ಸಂ. | ಅಧಿಕಾರಿಯ ಹೆಸರು | ಜಿಲ್ಲೆ |
|---|---|---|
| 01 | ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರಗಿ ವಿಭಾಗ | ಕಲಬುರಗಿ |
| 02 | ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ವಿಭಾಗ | ಧಾರವಾಡ |
| 03 | ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು | ಬೆಂಗಳೂರು ದಕ್ಷಿಣ |
| 04 | ನಿರ್ದೇಶಕರು(ಪ್ರಾಥಮಿಕ ಶಿಕ್ಷಣ), ಆಯುಕ್ತರ ಕಛೇರಿ, ಬೆಂಗಳೂರು | ಶಿವಮೊಗ್ಗ |
| 05 | ನಿರ್ದೇಶಕರು(ಪ್ರೌಢ ಶಿಕ್ಷಣ), ಆಯುಕ್ತರ ಕಛೇರಿ, ಬೆಂಗಳೂರು | ಬೆಳಗಾವಿ |
| 06 | ನಿರ್ದೇಶಕರು(ಉರ್ದು ಮತ್ತು ಅಲ್ಪಸಂಖ್ಯಾತ ಶಿಕ್ಷಣ),ಆಯುಕ್ತರ ಕಛೇರಿ, ಬೆಂಗಳೂರು | ಚಿಕ್ಕಬಳ್ಳಾಪುರ |
| 07 | ನಿರ್ದೇಶಕರು, ಡಿ.ಎಸ್.ಇ.ಆರ್.ಟಿ, ಬೆಂಗಳೂರು | ಚಿಕ್ಕಮಗಳೂರು |

| | | |
|---|---|---|
| 08 | ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯ ಪುಸ್ತಕ ಸಂಘ(ರಿ), ಬೆಂಗಳೂರು | ಮಂಡ್ಯ |
| 09 | ನಿರ್ದೇಶಕರು, ಸಾ.ಶಿ.ಇಲಾಖೆ, ಅಪರ ಆಯುಕ್ತರ ಕಛೇರಿ, ಧಾರವಾಡ | ಹಾವೇರಿ |
| 10 | ನಿರ್ದೇಶಕರು, ಸಾ.ಶಿ.ಇಲಾಖೆ, ಅಪರ ಆಯುಕ್ತರ ಕಛೇರಿ, ಕಲಬುರಗಿ | ಯಾದಗಿರಿ |
| 11 | ನಿರ್ದೇಶಕರು(ಪರೀಕ್ಷೆಗಳು), ಕ.ಪ್ರೌ.ಶಿ.ಪ.ಮಂಡಳಿ, ಮಲ್ಲೇಶ್ವರಂ, ಬೆಂಗಳೂರು | ಮೈಸೂರು |
| 12 | ನಿರ್ದೇಶಕರು, ಆರ್.ಐ.ಇ, ಜ್ಞಾನಭಾರತಿ, ಬೆಂಗಳೂರು | ಗದಗ |
| 13 | ನಿರ್ದೇಶಕರು(ಇತರೆ ಪರೀಕ್ಷೆಗಳು), ಕ.ಪ್ರೌ.ಶಿ.ಪ.ಮಂಡಳಿ, ಮಲ್ಲೇಶ್ವರಂ, ಬೆಂಗಳೂರು | ಹಾಸನ |
| 14 | ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು | ಕೋಲಾರ |
| 15 | ಸಹ ನಿರ್ದೇಶಕರು,(ಆಡಳಿತ), ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು | ಬೆಂಗಳೂರು ಉತ್ತರ |
| 16 | ಸಹ ನಿರ್ದೇಶಕರು (ಗುಣಮಟ್ಟ), ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು | ಮಂಗಳೂರು |
| 17 | ಸಹ ನಿರ್ದೇಶಕರು (ಕಾರ್ಯಕ್ರಮ), ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು | ರಾಮನಗರ |
| 18 | ಸಹ ನಿರ್ದೇಶಕರು (ಗುಣಮಟ್ಟ ಖಾತರಿ), ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು | ವಿಜಯನಗರ |
| 19 | ಸಹ ನಿರ್ದೇಶಕರು (ಶಾಲಾ ಶಿಕ್ಷಣ), ಆಯುಕ್ತರ ಕಛೇರಿ, ಬೆಂಗಳೂರು | ತುಮಕೂರು |
| 20 | ಸಹ ನಿರ್ದೇಶಕರು (ಬೆಂಗಳೂರು ವಿಭಾಗ), ಆಯುಕ್ತರ ಕಛೇರಿ, ಬೆಂಗಳೂರು | ಚಿತ್ರದುರ್ಗ |
| 21 | ಸಹ ನಿರ್ದೇಶಕರು, ಮಧ್ಯಾಹ್ನ ಉಪಹಾರ ಯೋಜನೆ, ಬೆಂಗಳೂರು | ಮಧುಗಿರಿ |
| 22 | ಸಹ ನಿರ್ದೇಶಕರು, ಡಿ.ಎಸ್.ಇ.ಆರ್.ಟಿ, ಬೆಂಗಳೂರು | ಬಳ್ಳಾರಿ |
| 23 | ಸಹ ನಿರ್ದೇಶಕರು,(ಆಡಳಿತ), ಅಪರ ಆಯುಕ್ತರ ಕಛೇರಿ, ಧಾರವಾಡ | ಚಿಕ್ಕೋಡಿ |
| 24 | ಸಹ ನಿರ್ದೇಶಕರು,(ಆಡಳಿತ), ಅಪರ ಆಯುಕ್ತರ ಕಛೇರಿ, ಕಲಬುರಗಿ | ಬೀದರ್ |
| 25 | ಸಹ ನಿರ್ದೇಶಕರು, ವಿಭಾಗೀಯ ಕಾರ್ಯದರ್ಶಿಗಳ ಕಛೇರಿ, ಕಲಬುರಗಿ ವಿಭಾಗ ಕಲಬುರಗಿ | ರಾಯಚೂರು |
| 26 | ಸಹ ನಿರ್ದೇಶಕರು, ವಿಭಾಗೀಯ ಕಾರ್ಯದರ್ಶಿಗಳ ಕಛೇರಿ, ಬೆಳಗಾವಿ ವಿಭಾಗ ಬೆಳಗಾವಿ | ಬಾಗಲಕೋಟೆ |
| 27 | ಸಹ ನಿರ್ದೇಶಕರು, ವಿಭಾಗೀಯ ಕಾರ್ಯದರ್ಶಿಗಳ ಕಛೇರಿ, ಮೈಸೂರು ವಿಭಾಗ ಮೈಸೂರು | ಚಾಮರಾಜನಗರ |
| 28 | ಕಾರ್ಯದರ್ಶಿಗಳು, ಕ.ಪ್ರೌ.ಶಿ.ಪ.ಮಂಡಳಿ, ಮಲ್ಲೇಶ್ವರಂ, ಬೆಂಗಳೂರು. | ಬೆಂಗಳೂರು ಗ್ರಾಮಾಂತರ |
| 29 | ಪ್ರಾಂಶುಪಾಲರು, ಸಿ.ಟಿ.ಇ, ಚಿತ್ರದುರ್ಗ | ದಾವಣಗೆರೆ |
| 30 | ಪ್ರಾಂಶುಪಾಲರು, ಸಿ.ಟಿ.ಇ, ಮೈಸೂರು | ಕೊಡಗು |
| 31 | ಪ್ರಾಂಶುಪಾಲರು, ಸಿ.ಟಿ.ಇ, ಕಲಬುರಗಿ | ಕೊಪ್ಪಳ |
| 32 | ಪ್ರಾಂಶುಪಾಲರು, ಸಿ.ಟಿ.ಇ, ಬೆಳಗಾವಿ | ಉತ್ತರ ಕನ್ನಡ & ಶಿರಸಿ |
| 33 | ಪ್ರಾಂಶುಪಾಲರು, ಸಿ.ಟಿ.ಇ, ಮಂಗಳೂರು | ಉಡುಪಿ |
| 34 | ಪ್ರಾಂಶುಪಾಲರು, ಸಿ.ಟಿ.ಇ, ಜಮಖಂಡಿ, ಬಾಗಲಕೋಟೆ | ವಿಜಯಪುರ |

**ವಿಶೇಷ ಸೂಚನೆ:**

1) **ಜಿಲ್ಲಾ ನೋಡಲ್ ಅಧಿಕಾರಿಗಳು ಸಭೆಯಲ್ಲಿ 2021-22ನೇ ಸಾಲಿನ ಅನುಬಂಧದಲ್ಲಿ ಸೂಚಿಸಿರುವ ಅಂಶಗಳನ್ವಯ ಪ್ರಗತಿ ಪರಿಶೀಲನೆ ನಡೆಸುವುದು. (ಅನುಬಂಧವು ಇಲಾಖಾ ವೆಬ್‌ಸೈಟ್‌ನ ಸುತ್ತೋಲೆ ದಿ:31.07.2021ರಲ್ಲಿ ಲಭ್ಯವಿದೆ)**

2) ಮಾನ್ಯ ಆಯುಕ್ತರು 2022–23ನೇ ಸಾಲಿನ ಶೈಕ್ಷಣಿಕ ಚಟುವಟಿಕೆಗಳ ಕ್ರಿಯಾಯೋಜನೆ ಅನುಷ್ಠಾನ ಹಾಗೂ ವಾರ್ಷಿಕ ಕಾರ್ಯಸೂಚಿ ಕುರಿತು ಹೊರಡಿಸಿರುವ ಸುತ್ತೋಲೆ ಸಂಖ್ಯೆ:ಸಿ4(6)ಶೈ.ವ.ಪ್ರಾ–01/2022–23 ದಿನಾಂಕ: 20.04.2022ರಲ್ಲಿರುವ ಎಲ್ಲಾ ಅಂಶಗಳನ್ನು ಪರಿಶೀಲಿಸುವುದು. (ಸುತ್ತೋಲೆಯು ಇಲಾಖಾ ವೆಬ್‌ಸೈಟ್‌ನ ಸುತ್ತೋಲೆ ದಿ:21.04.2022ರಲ್ಲಿ ಲಭ್ಯವಿದೆ).

3) ಕೋವಿಡ್–2019ರ ಹಿನ್ನೆಲೆಯಲ್ಲಿ ಸರ್ಕಾರ, ಇಲಾಖೆ ಮತ್ತು ಜಿಲ್ಲಾಡಳಿತಗಳು ನೀಡುವ ಸೂಚನೆ ಮತ್ತು ನಿರ್ದೇಶನಗಳನ್ನು ಪಾಲಿಸುವುದು.

R 09/05/2022

(ಡಾ.ವಿಶಾಲ್.ಆರ್, ಭಾ.ಆ.ಸೇ)

ಆಯುಕ್ತರು, ಸಾ.ಶಿ.ಇಲಾಖೆ

ಬೆಂಗಳೂರು

ಪ್ರತಿಯನ್ನು:

01. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರವರಿಗೆ ವಂದನೆಗಳೊಂದಿಗೆ ಮಾಹಿತಿಗಾಗಿ ಸಲ್ಲಿಸಿದೆ.
02. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
03. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ/ಕಲಬುರಗಿರವರಿಗೆ ಸೂಕ್ತ ಕ್ರಮಕ್ಕಾಗಿ.
04. ಸಂಬಂಧಿಸಿದ ನೋಡಲ್ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.
05. ರಾಜ್ಯದ ಎಲ್ಲಾ ಉಪ ನಿರ್ದೇಶಕರು (ಆಡಳಿತ & ಅಭಿವೃದ್ಧಿ), ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು, ಸಾ.ಶಿ.ಇಲಾಖೆ ರವರಿಗೆ ಸೂಕ್ತ ಕ್ರಮಕ್ಕಾಗಿ.
06. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು/ಶಿಕ್ಷಣಾಧಿಕಾರಿಗಳು, ಜಿಲ್ಲಾ ಪಂಚಾಯತ್(ಅಕ್ಷರ ದಾಸೋಹ), ಸಹಾಯಕ ನಿರ್ದೇಶಕರು(ಅಕ್ಷರ ದಾಸೋಹ), ಕ್ಷೇತ್ರ ಸಮನ್ವಯಾಧಿಕಾರಿಗಳು ರವರಿಗೆ ಸೂಕ್ತ ಕ್ರಮಕ್ಕಾಗಿ ಸಂಬಂಧಿಸಿದ ಉಪನಿರ್ದೇಶಕರು(ಆಡಳಿತ) ರವರ ಮುಖಾಂತರ.
07. ಈ ಕಛೇರಿಯ ಸಂಬಂಧಿಸಿದ ಎಲ್ಲಾ ಅಧಿಕಾರಿಗಳು ಹಾಗೂ ಶಾಖಾಧಿಕಾರಿಗಳಿಗೆ ಮಾಹಿತಿಗಾಗಿ.
08. ಆಯುಕ್ತರ ಆಪ್ತ ಶಾಖೆಗೆ.
09. ಕಛೇರಿ ಪ್ರತಿ.